**FIELD WORK REPORT**

'ಚಿಗುರು' ಎಂಟರ್‌ಪ್ರೈಸಸ್ ಸ್ವ-ಸಹಾಯ ಗುಂಪಿನ ಸದಸ್ಯರು ಮಾಡುತ್ತಿರುವ ಟೆರಕೋಟ ಮಣಿಗಳ ತಯಾರಿಕೆ & ಮಾರಾಟ ಕುರಿತು ವರದಿ.

[illegible] ಜಾಗೃತ ಮಹಿಳಾ ಸಂಘಟನೆಯಲ್ಲಿ ರೂಪುಗೊಂಡಿರುವ "ಚಿಗುರು ಎಂಟರ್‌ಪ್ರೈಸಸ್ ಸ್ವ-ಸಹಾಯ ಸಂಘದ ಸದಸ್ಯೆಯರು ಟೆರಕೋಟ ಮಣಿಗಳ ತಯಾರಿಕೆಯನ್ನು ಮಾಡಿ ಮಾರಾಟ ಮಾಡಿ ಆರ್ಥಿಕ ಲಾಭವನ್ನು ಪಡೆಯುತ್ತಿರುವ ಹಾಗೂ ಜೀವನದಲ್ಲಿ ವೃತ್ತಿಯಾಗಿ ಸ್ವೀಕರಿಸಿ ಮಣಿಗಳನ್ನು ತಯಾರಿಸುತ್ತಿದ್ದಾರೆ. ಇದು ನಿಜಕ್ಕೂ ಆಶ್ಚರ್ಯಕರ ಮತ್ತು ವಿವಿಧ ರೂಪವನ್ನು ನೀಡಿ ಆಕರ್ಷಕವಾದ ಮಣಿಗಳು, ಸರಗಳು, ಬಾಗಿಲ ತೋರಣಗಳು, ಮುಂತಾದ ಅಲಂಕಾರಿಕ ವಸ್ತುಗಳನ್ನು ತಯಾರಿಸುತ್ತಿದ್ದಾರೆ.

ಸುಮಾರು 10 ವರ್ಷಗಳ ಹಿಂದೆ ಈ ದಲಿತ ಮಹಿಳೆಯರು ಸಾಂಪ್ರದಾಯಿಕ ಕಟ್ಟುಪಾಡುಗಳಿಗೆ ಒಳಗಾಗಿ 4 ಗೋಡೆಗಳ ಮಧ್ಯೆ ಜೀವಿಸುತ್ತಿದ್ದು, ಆರ್ಥಿಕವಾಗಿ, ಸಾಮಾಜಿಕವಾಗಿ ಬಹಳ ಹಿಂದುಳಿದಿದ್ದರು. ಮೇಲ್ವರ್ಗದವರ ದೌರ್ಜನ್ಯಗಳಿಗೆ ಒಳಗಾಗಿದ್ದರು ಅಲ್ಲದೆ ಇವರು ಹೊಲ-ಗದ್ದೆಗಳಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು. ಆದರೆ ಸರಿಯಾದ ವೇತನ ದೊರೆಯುತ್ತಿರಲಿಲ್ಲ. ಇದರಿಂದಾಗಿ ಇವರ ಜೀವನ ಕಷ್ಟವಾಗಿತ್ತು. ಇದೆಲ್ಲವನ್ನು ಗಮನಿಸಿದ ಜಾಗೃತ

ಮಹಿಳಾ ಸಂಘಟನೆಯು ನಿರಂತರವಾಗಿ ಶ್ರಮಿಸಿ ಈ ಮಹಿಳೆ
ಯರಲ್ಲಿ ಜಾಗೃತಿ ಮನೋಭಾವನೆಯನ್ನು ಬೆಳೆಸಿ ಸಂಘಟನೆ
ಯ ಮಹತ್ವವನ್ನು ತಿಳಿಸಿ ಅವರಲ್ಲಿ ಸಂಘಟನೆಯನ್ನುಂಟು
ಮಾಡಿ, ಈ ಮಹಿಳೆಯರಿಗೆ ಬೇಕಾಗಿರುವ ತರಬೇತಿಯನ್ನು
ನೀಡಿ, ಉದ್ಯೋಗವನ್ನು ಮಾಡುವ ಕೌಶಲ್ಯವನ್ನು ಬೆಳೆಸಿದೆ.
ಇದರಿಂದಾಗಿ ಈ ಸ್ವಯಂ ಸೇವಾ ಸಂಸ್ಥೆಯಲ್ಲಿ ತೊಡಗಿರುವ
ಮಹಿಳೆಯರು ಇಂದು ಅನೇಕ ಬದಲಾವಣೆಗಳನ್ನು ತಮ್ಮ
ಜೀವನದಲ್ಲಿ ಕಂಡಿದ್ದಾರೆ. ಇನ್ನೊಬ್ಬರ ಹೊಲ - ಗದ್ದೆಗಳಲ್ಲಿ
ಕೂಲಿ ಮಾಡುತ್ತಿದ್ದ ಇವರು ಇಂದು ಇದನ್ನು ಬಿಟ್ಟು
ಸ್ವಉದ್ಯೋಗವನ್ನಾಗಿ ಸ್ವೀಕರಿಸಿ ಯಾರ ಕೈ ಕೆಳಗೂ ಕೆಲಸ
ಮಾಡದೆ, ಸ್ವತಂತ್ರವಾಗಿ ಸ್ವಾವಲಂಬಿಗಳಾಗಿ ದುಡಿಯು
ತ್ತಿದ್ದಾರೆ. ಇದರಿಂದಾಗಿ ಇವರ ಬದುಕಿಗೆ ಆರ್ಥಿಕ
ಭದ್ರತೆ ದೊರೆತು ಆರ್ಥಿಕವಾಗಿ, ಸಾಮಾಜಿಕವಾಗಿ
ಅಭಿವೃದ್ಧಿಯನ್ನು ಹೊಂದುತ್ತಿದ್ದಾರೆ ಅಲ್ಲದೆ ಇತರೆ
ಮಹಿಳೆಯರ ಅಭಿವೃದ್ಧಿಗೆ ಮಾದರಿಯಾಗಿದ್ದಾರೆ.
ಅಲ್ಲದೆ ಈ ಸಂಸ್ಥೆಯಿಂದ ತುಂಬಾ ಆರ್ಥಿಕವಾಗಿ
ಮಹಿಳೆಯರನ್ನು ಅವಲಂಬಿಸದೆ ಸ್ವಾವಲಂಬನೆಯನ್ನು
ಹೊಂದಿದ್ದರಿಂದ ಈ ಮಹಿಳೆಯರು ತೋರಿಸುತ್ತಾರೆ.
ಆಗಿ ಈ ಜಾಗೃತ ಮಹಿಳಾ ಸಂಘಟನೆಯು
ಬೇಕಾಗಿರುವ ಎಲ್ಲಾ ತರಹದ ತರಬೇತಿಯನ್ನು ನೀಡಿ
ಈ ಮಹಿಳೆಯರು ತಮ್ಮ ಜೀವನವನ್ನು ರೂಪಿಸಿ
ಕೊಳ್ಳಲು ನೆರವಾಗಿದೆ.

## FIELD WORK REPORT

ಚಿರಕೋಟಿಯ ಕಾಯಕದಲ್ಲಿ ತೊಡಗಿರುವ ಮಹಿಳೆಯರ ಹೆಸರುಗಳು

ಚಿಗುರು ಎಂಟರ್ ಪ್ರೈಸಸ್ ನ ಸದಸ್ಯೆಯರು

| ಹೆಸರು | | ಅನುಭವ |
|---|---|---|
| ಲಕ್ಷ್ಮವ್ವ | ಅಧ್ಯಕ್ಷರು | 9 ವರ್ಷಗಳು |
| ಶಿಲಿಂಗವ್ವ | ಉಪಾಧ್ಯಕ್ಷರು | 9 ವರ್ಷ |
| ಹನುಮಂತ | ಸದಸ್ಯ | 7 ವರ್ಷ |
| ಜೌನವ್ವ | ಸದಸ್ಯ | 7 ವರ್ಷ |
| ಹುಲಿಗವ್ವ | ಸದಸ್ಯ | 3 ವರ್ಷ |
| ದುರ್ಗವ್ವ | ಸದಸ್ಯ | 7 ವರ್ಷ |
| ಜೈಬುಬಾನ್ | ಸದಸ್ಯ | 7 ವರ್ಷ |
| ಸಣ್ಣ ಹನುಮಂತ | ಸದಸ್ಯ | 2 ವರ್ಷ |
| ಸಣ್ಣ ದುರ್ಗವ್ವ | ಸದಸ್ಯೆ | |



AnyScanner

ಈ ಎಲ್ಲಾ ಮಹಿಳೆಯರು ಸೂಕ್ತ ತರಬೇತಿಯನ್ನು ಪಡೆದು ಇಂದು ಬೇರೆಬೇರೆ ಕಾರ್ಯಚಟುವಟಿಕೆಯಲ್ಲಿ ತೊಡಗಿದ್ದಾರೆ.

ತರಬೇತುದಾರರು :- ಈ ಮಹಿಳೆಯರಿಗೆ ತರಬೇತಿಯನ್ನು ನೀಡಿದವರು ಕೀರ್ತಿ ಮಂಜುಳರು. ಇವರು ಜಾಗೃತ ಮಹಿಳಾ ಸಂಘಟನಾ ಕಾರ್ಯಕರ್ತರಾಗಿದ್ದು ದಲಿತ ಮಹಿಳೆಯರಲ್ಲಿ ಸಂಘಟನೆಯನ್ನುಂಟುಮಾಡಿ ಅವರಿಗೆ ಈ ಬೇರೆಬೇರೆ ತರಬೇತಿಯನ್ನು ನೀಡಿದ್ದಾರೆ. ಇವರು ತರಬೇತಿಯನ್ನು ನೀಡಿ ಸುಮಾರು 4 ವರ್ಷಗಳ ಕಾಲ ಈ ಮಹಿಳೆಯರೊಂದಿಗೆ ಇದ್ದು ಅವರಿಗೆ ಬೆಂಬಲ ನೀಡುತ್ತಾ, ಹೊಸ ವಿನ್ಯಾಸಗಳನ್ನು ತೋರಿಸುತ್ತಾ ಈ ಮಹಿಳೆಯರಿಗೆ ಧೈರ್ಯವನ್ನು ನೀಡಿ, ವಸ್ತುಗಳನ್ನು ತಯಾರಿಸಿ, ಅವುಗಳಿಗೆ ಸೂಕ್ತ ಮಾರುಕಟ್ಟೆಯನ್ನು ಒದಗಿಸಿ ಇಂದು ಈ ಮಹಿಳೆಯರು ಸ್ವಾವಲಂಬಿಗಳಾಗಲು ಸಹಾಯ ಮಾಡಿದ್ದಾರೆ. ಈ ಬೇರೆಬೇರೆ ವಸ್ತುಗಳನ್ನು ಮಾಡಲು 3 ತಿಂಗಳುಗಳ ಕಾಲ ತರಬೇತಿಯನ್ನು ಪಡೆಯಬೇಕಾಗುವುದನ್ನು ಈ ಮಹಿಳೆಯರು ತಿಳಿಸಿದ್ದಾರೆ.

## FIELD WORK REPORT

ಕಚ್ಚಾ ವಸ್ತುಗಳು :- ಈ ಮಣಿಗಳನ್ನು ತಯಾರಿಸಲು ಬೇಕಾಗುವ ಮಣ್ಣು, ಬಣ್ಣಗಳು, ದಾರ, ಪೇಂಟಿಂಗ ಬ್ರಶ್, ಪ್ಲಾಸ್ಟಿಂಗ ಮಣಿಗಳು ಇತರ ವಸ್ತುಗಳನ್ನು ಬೆಂಗಳೂರಿನಿಂದ ತರುತ್ತೇವೆಂದು ತಿಳಿಸಿದರು.

ಮಾರಾಟ:- ಈ ಮಣಿಗಳನ್ನು ತಯಾರಿಸಿದ ನಂತರ ವರ್ಷಕ್ಕೆ 2 ಬಾರಿ ದಸರಾ ವಸ್ತು ಪ್ರದರ್ಶನಾಲಯ ಬೆಂಗಳೂರು ಮತ್ತು ದೆಹಲಿಯಲ್ಲಿ ಮಾರಾಟ ಮಾಡುತ್ತಾರೆ. ಇಲ್ಲದೆ ಸ್ಥಳೀಯವಾಗಿ ಯಾರಾದರೂ ಬೇಕೆಂದರೆ ಕೊಡುತ್ತಾರೆ. ಹಾಗೂ ಬೇರೆ ಸ್ವಯಂ ಸೇವಾ ಸಂಸ್ಥೆಗಳು ಮಾರಾಟಕ್ಕೆ ಆರ್ಡರ್ ಕೊಟ್ಟರೆ ಮಾರಾಟ ಮಾಡುತ್ತಾರೆ.

ಲಾಭ:- ಈ ಚಿರಕೋಟ ಮಾರಾಟದಿಂದ ಬರುವ ಹಣದಿಂದ ತಮಗೆ ಮಣಿ ತಯಾರಿಸಲು ಬೇಕಾದ ಕಚ್ಚಾ ವಸ್ತುಗಳನ್ನೆಲ್ಲಾ ತೆಗೆದುಕೊಂಡು, ಉಳಿದ ಹಣವನ್ನು ಸಂಸ್ಥೆಯ ಸದಸ್ಯರು ಹಂಚಿಕೊಳ್ಳುತ್ತಾರೆ. ಇಲ್ಲದೆ ಈ ಸಂಸ್ಥೆಯ ವತಿಯಿಂದ ಬ್ಯಾಂಕಿನಲ್ಲಿ ಜಂಟಿ ಖಾತೆ ತೆರೆದು ಹಣವನ್ನು ಉಳಿತಾಯ ಮಾಡುತ್ತಿದ್ದಾರೆ. ಇಲ್ಲದೆ ವಾರಕ್ಕೆ 150 ರೂಗಳನ್ನು ತಪ್ಪ ಕೊಡಯಿಂದು ಪಡೆಯುತ್ತಾರೆ. ಉಳಿದ ಹಣ ಬ್ಯಾಂಕಿನಲ್ಲಿದ್ದು, ಕಷ್ಟಕ್ಕೆ ಬೇಕಾದಾಗ

## FIELD WORK REPORT

ಸದಸ್ಯರು ಹಣವನ್ನು ಪಡೆದುಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಂಡಿದ್ದಾರೆ. ಈ ಒಕ್ಕೂಟದಿಂದಾಗಿ ಆರ್ಥಿಕವಾಗಿ ಅನ್ನು ಪಡೆದು ಸ್ವಾವಲಂಬಿಗಳಾಗಿದ್ದೇವೆಂದು ಈ ಮಹಿಳೆಯರು ತಿಳಿಸಿದರು.

ಒಕ್ಕೂಟದಿಂದಾಗಿರುವ ಮಹಿಳೆಯರ ಅಭಿವೃದ್ಧಿ

ಈ ಒಕ್ಕೂಟ ಮಾಡಲು ಪ್ರಾರಂಭಿಸಿದ್ದರಿಂದ ನಾವು ಆರ್ಥಿಕವಾಗಿ, ಸಾಮಾಜಿಕವಾಗಿ ಅಭಿವೃದ್ಧಿಯನ್ನು ಹೊಂದಿದ್ದೇವೆ ಎಂದು ಈ ಮಹಿಳೆಯರು ತಿಳಿಸಿದ್ದಾರೆ. ಈ ಒಕ್ಕೂಟ ಮಾಡುವುದರಿಂದ ನಾವು ಸ್ವಾವಲಂಬಿಗಳಾಗಿದ್ದೇವೆ. ಮೊದಲು ಕೂಲಿ ಕೆಲಸಕ್ಕೆ ಹೋಗುತ್ತಿದ್ದಾಗ ವಿಶ್ರಾಂತಿ ಇಲ್ಲದೆ ಬೆಳಗಿನಿಂದ ಸಂಜೆಯ ವರೆಗೆ ದುಡಿಯಬೇಕಿತ್ತು. ಅವರು ಹೇಳಿದಂತೆ ಕೇಳಬೇಕಿತ್ತು. ಅವರು ಕೊಟ್ಟಾಗ ಕೂಲಿಯನ್ನು ತೆಗೆದುಕೊಳ್ಳಬೇಕಿತ್ತು ನಾವು ಅವರ ಗುಲಾಮರಂತೆ ಇದ್ದೆವು ಆದರೆ ಒಕ್ಕೂಟದಿಂದಾಗಿ ಈ ಯಾವುದೇ ಸಮಸ್ಯೆ ಇಲ್ಲದೆ ಕೆಲಸ ಮಾಡುತ್ತೇವೆಂದು ತಿಳಿಸಿದರು.

ಎರಡನೆಯದಾಗಿ ಆರ್ಥಿಕವಾಗಿ ಅಭಿವೃದ್ಧಿಯನ್ನು ಹೊಂದಿದ್ದಾರೆ. ಒಕ್ಕೂಟದಿಂದ ಬಂದ ಲಾಭವನ್ನು ಉಳಿತಾಯ ಮಾಡಿಕೊಂಡಿದ್ದಾರೆ. ಇದರಿಂದಾಗಿ ಇವರು ಮಕ್ಕಳ ಬಟ್ಟೆ ಸಾಲಗಾರರಿಗೆ - ವಂತಿಗೆ, ತಮ್ಮ ಕಷ್ಟ ಕಾಲಕ್ಕೆ ತಮ್ಮ ದವಾಖಾನೆಗೆ ಬಳಕೆ ಮಾಡಿಕೊಳ್ಳುವ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಬಿರಕೋಲಿನ ಮಡಕೆಗಳನ್ನು ಮಾರಾಟ ಮಾಡಲು ಪ್ರಾರಂಭದಲ್ಲಿ ಇವರಿಗೆ ಭಯ ಉಂಟಾಗಿತ್ತು. ಕಾರಣ ಭಾಷೆ ತೊಂದರೆಯಾಗಿತ್ತು. ಅಲ್ಲದೆ ನಾಲ್ಕು ಗೋಡೆಗಳ ಮಧ್ಯೆ ಇರುತ್ತಿದ್ದ ಈ ಮಹಿಳೆಯರು ಹೊರ ಪ್ರಪಂಚಕ್ಕೆ ಬರುವಾಗ ಪ್ರಾರಂಭದಲ್ಲಿ ಕಷ್ಟವಾಗಿತ್ತು. ಆದರೆ ಇಂದು ಈ ಮಹಿಳೆಯರು ಪೇಟೆ ವ್ಯಾಪಾರಕ್ಕೆ ಹೋಗುತ್ತಾರೆ ಎಂದರೆ ಇವರಲ್ಲಿ ಎಷ್ಟು ಬೆಳವಣಿಗೆಯಾಗಿದೆ, ಬದಲಾವಣೆಯಾಗಿದೆ ಎಂಬುದನ್ನು ನಾವಿಲ್ಲಿ ಗಮನಿಸಬೇಕಾಗಿದೆ. ಅಲ್ಲದೆ ತಮ್ಮ ಕಾರ್ಯಚಟುವಟಿಕೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ.

ಈ ಮಹಿಳೆಯರಿಗೆ ಧೈರ್ಯವಾಗಿ ಹೋಗಬೇಕು ಎನ್ನುವಾಸೆ ಬಂದಿದೆ. ಅಲ್ಲದೆ ಆಸಕ್ತಿ, ಸಂಸ್ಕಾರದ ಇವರು ಕಲಿಕೆ ಮತ್ತು ಜ್ಞಾನವನ್ನು ಪಡೆದುಕೊಂಡಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಹೊರಲೋಕದ ಲೋಕಜ್ಞಾನ ಇವರಿಗಾಗಿದೆ ಎಂದರೆ ತಪ್ಪಾಗಲಾರದು. ಇನ್ನೊಬ್ಬರ ಮನೆ- ಹೊಲಗಳಲ್ಲಿ ಕೆಲಸ ಮಾಡುತ್ತಿದ್ದ ಈ ಮಹಿಳೆಯರು ಇಂದು ಸ್ವ- ಉದ್ಯೋಗಿಗಳಾಗಿದ್ದಾರೆ, ಸ್ವಾವಲಂಬಿಗಳಾಗಿದ್ದಾರೆ. ಜ್ಞಾನವನ್ನು ಪಡೆದಿದ್ದಾರೆ, ಪೇಟೆ ಮಾರಾಟ ಮಾಡಲು ದೂರದ ಪ್ರದೇಶಗಳಿಗೆ ಹೋಗುತ್ತಿದ್ದಾರೆ ಇದು ನಿಜವಾಗಿಯೂ ಇವರ ಅಭಿವೃದ್ಧಿಯಾಗಿದೆ ಎಂಬುದನ್ನು ತೋರಿಸುತ್ತದೆ.



AnyScanner

ಈ ಮಹಿಳೆಯರ 10 ವರ್ಷಗಳ ಹಿಂದಿನ ಸ್ಥಿತಿಗತಿಗ ಪ್ರಸ್ತುತದಲ್ಲಿರುವ ಇವರ ಸ್ಥಿತಿಗತಿಗಳಿಗೂ ಹೋಲಿಕೆ ಮಾಡಿ ನೋಡಿದರೆ ಖಂಡಿತವಾಗಿಯೂ ಈ ಮಹಿಳೆಯರ ಸಬಲೀಕರಣ ಉಂಟಾಗಿದೆ ಎಂದು ಹೇಳಬಹುದು.

ಈ ಎಲ್ಲಾ ಚಟುವಟಿಕೆಗಳಿಂದಾಗಿ ಈ ಮಹಿಳೆಯರು ತಮ್ಮ ಮಕ್ಕಳ ಅಧ್ಯಯನಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದಾರೆ.

ಈ ಎಲ್ಲಾ ಬದಲಾವಣೆಗಳು ಈ ಸಂಘದ ಮಹಿಳೆಯರಲ್ಲಿ ಕಂಡುಬರುತ್ತವೆ.

## ಪ್ರಯೋಜನಗಳು

* ಆರ್ಥಿಕವಾಗಿ ಮಹಿಳೆಯರಲ್ಲಿ ಸಂಘಟನಾ ಮನೋಸ್ಥೈರ್ಯ ಬೆಳೆ ಅಧಿಕವಾಗಿದೆ
* ಶಿಕ್ಷಣ ಪದ್ಧತಿ ಈ ಮಹಿಳೆಯರಿಗೆ ದೊರೆತಿದೆ.
* ಉಳಿತಾಯದ ಮನೋಭಾವನೆ ಉಂಟಾಗಿದೆ.
* ಆರೋಗ್ಯದ ಬಗ್ಗೆ ತಿಳಿವುಂಟಾಗಿದೆ
* ಸಾಮಾಜಿಕ ಸ್ಥಾನ ಮಾನಗಳಲ್ಲಿ ಬದಲಾವಣೆಯುಂಟಾಗಿದೆ
* ಸ್ವಾವಲಂಬಿ ಜೀವನ ಹಾಗೂ ಸ್ವ-ಉದ್ಯೋಗ ಈ ಮಹಿಳೆಯರದಾಗಿದೆ
* ಕುಟುಂಬ ಹಾಗೂ ಸಮುದಾಯದಲ್ಲಿ ತಮ್ಮ ಪಾ

AnyScanner

ಸ್ಥಿನ ಮಾಹಿತಿ

* ಜೀವನದಲ್ಲಿ ಯಾವುದೇ ರೀತಿಯಲ್ಲಿ ಕಷ್ಟಗಳು ಎದು-
ರಾದರು ಅವುಗಳನ್ನು ಎದುರಿಸುವ ಧೈರ್ಯ ಬಂದಿದೆ.
ಹೀಗೆ ಇವರ ಜೊತೆಯಾದ ಪ್ರಯಾಣದಿನಗಳ
ಈ ಮಹಿಳೆಯರಿಗೆ ಮಾಹಿತಿ. ಕೆಲವು ಬರುವ ಕಷ್ಟ-
ಕ್ಕೆ ತಕ್ಕ ಪ್ರತಿಫಲ ನಮಗೆ ದೊರೆಯುತ್ತಿದೆ ಎಂದು
ಈ ಮಹಿಳೆಯರನ್ನು ಭೇಟಿ ಮಾಡಿದಾಗ ತಿಳಿಸಿದ-
ರು. ಒಟ್ಟಾರೆಯಾಗಿ ಹೇಳುವುದಾದರೆ ಈ ಸಂಘ-
ಟನೆ ತಮ್ಮ ಜೀವನವನ್ನೇ ಬದಲಿಸಿದೆ ಎಂದು
ಹೇಳುತ್ತಾರೆ. ಅಲ್ಲದೆ ತಾವು ಸುಖವಾಗಿದ್ದೇವೆಂದು
ತಿಳಿಸಿದರು.

<u>ಪ್ರಸ್ತುತ ಸಮಸ್ಯೆ:-</u> ಈ ಸಂಘಟನೆಯ ಕಾರ್ಯ
ಚಟುವಟಿಕೆಯು ಯಶಸ್ವಿಯಾಗಿ ನಡೆಯುತ್ತಿದೆ. ಆದರೆ
ಇದನ್ನು ಮಾರಾಟ ಮಾಡುವಾಗ ಸ್ವಲ್ಪ ಸಮಸ್ಯೆಯಾ-
-ಗಿದೆ ಎಂದು ತಿಳಿಸಿದರು. ಕೆಲವು ಅನಕ್ಷರಸ್ಥರಾಗಿದ್ದು
ಪ್ರದರ್ಶನಗಳಲ್ಲಿ ಮಾರಾಟಕ್ಕೆ ಹೋದಾಗ ಬಿಲ್ ಗಳನ್ನು
ಬರೆಯುವುದು ತಮಗೆ ಸಮಸ್ಯೆಯಾಗಿದೆ. ಇದಕ್ಕೆ
ಮೀರಲು ಸಮಸ್ಯೆಯಾಗಿತ್ತು. ಆದರೆ ಇಂದು ಇದಕ್ಕೆಯ
ಸಮಸ್ಯೆಯಿಲ್ಲ ಎಂಬುದನ್ನು ಈ ಮಹಿಳೆಯರು
ತಿಳಿಸಿದ್ದಾರೆ.

AnyScanner

## FIELD WORK REPORT

**ಉಪಸಂಹಾರ:-** ಇಂದು ಈ ಮಹಿಳೆಯರು ಜಾಗೃತ ಮಹಿಳಾ ಸಂಘಟನೆಯಲ್ಲಿ ಸಂಘವನ್ನು ಸ್ಥಾಪಿಸುವುದರ ಮೂಲಕ ಬರಕೋಲುವನ್ನು ವೃತ್ತಿಯನ್ನಾಗಿ ಮಾಡಿಕೊಂಡು ತಮ್ಮ ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಅಭಿವೃದ್ಧಿಯನ್ನು ಸಾಧಿಸುವುದರ ಮೂಲಕ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ತಾವು ಸ್ವಾವಲಂಬಿಗಳು, ಸ್ವತಂತ್ರರು ಎಂಬುದನ್ನು ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ.

AnyScanner